# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 09.04.2021ರಂದು ಗಂಟೆ 12.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಗಳು.

**ಉಪಸ್ಥಿತರು:**

**ಅನುಪಸ್ಥಿತರು:**

## ಪ್ರಾರಂಭಿಕ

ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಪ್ರಾರಂಭದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. 2021 ನೇ ಸಾಲಿನಲ್ಲಿ (ಮಾರ್ಚ್ /ಎಪ್ರಿಲ್) ಮಂಗಳೂರು ವಿಶ್ವವಿದ್ಯಾನಿಲಯವು ನಡೆಸಿದ ಪದವಿ ಪರೀಕ್ಷೆಯ ಕುರಿತು ಆಂತರಿಕವಾಗಿ ಅಭಿವೃದ್ಧಿ ಪಡಿಸಿದ ತಂತ್ರಾಂಶವು ವಿಫಲವಾಗಿದೆ ಎಂದು ವಿಶ್ವವಿದ್ಯಾನಿಲಯದ ಪರೀಕ್ಷಾ ವ್ಯವಸ್ಥೆಯ ವಿರುದ್ಧ ಸುಳ್ಳು ಹಾಗೂ ಮಾನ ಹಾನಿಕಾರಕ ಸುದ್ದಿಯನ್ನು ಸೃಷ್ಟಿಸಿ, ಸಾಮಾಜಿಕ ಮಾಧ್ಯಮ / ಜಾಲತಾಣದಲ್ಲಿ ಪ್ರಸರಿಸಿ, ಗೊಂದಲವನ್ನು ಉಂಟುಮಾಡಿ ತನ್ಮೂಲಕ ವಿದ್ಯಾರ್ಥಿಗಳಲ್ಲಿ ಹಾಗೂ ಹೆತ್ತವರಲ್ಲಿ ಭಯ ಹಾಗೂ ಭೀತಿಯನ್ನು ಉಂಟುಮಾಡಿ ಸಾರ್ವಜನಿಕ ವಿರೋಧಿ ಕೃತ್ಯಗಳನ್ನೆಸಗಿದ ವ್ಯಕ್ತಿಗಳ ಹಾಗೂ ಸ್ಥಾಪಿತ ಹಿತಾಸಕ್ತಿಯ ಶಕ್ತಿಗಳನ್ನು ಪತ್ತೆ ಹಚ್ಚಲು ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಿಂಡಿಕೇಟು ಸರ್ವಾನುಮತದ ನಿರ್ಣಯ ಕೈಗೊಂಡಿದ್ದು, ಈ ಕುರಿತು ಲಿಖಿತ ದೂರನ್ನು ಮಂಗಳೂರಿನ ಸೈಬರ್ ಪೊಲೀಸ್ ಠಾಣೆ ಮತ್ತು ಮಂಗಳೂರು ನಗರದ ಪೊಲೀಸ್ ಆಯುಕ್ತರಿಗೆ ತಕ್ಷಣವೇ ದೂರು ಸಲ್ಲಿಸಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

2. ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಹಾಗೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಶ್ವವಿದ್ಯಾನಿಲಯದ ಹಕ್ಕಿನ ಹಾಗೂ ಸ್ವಾಮಿತ್ತ್ವದ ಎಲ್ಲಾ ದಾಖಲೆಗಳು ಹಾಗೂ ದತ್ತಾಂಶಗಳನ್ನು ದುರುದ್ದೇಶದಿಂದ ನೀಡದ ಮೆ. ಆಟ್ರಿಸ್ ಟೆಕ್ನಾಲಜೀಸ್ (ಪ್ರೈ) ಲಿ., ಬೆಂಗಳೂರು ಸಂಸ್ಥೆಯ ಮತ್ತು ಅದರ ನಿರ್ದೇಶಕರುಗಳ ವಿರುದ್ಧ ಸೂಕ್ತ ಕ್ರಿಮಿನಲ್ ಹಾಗೂ ಸಿವಿಲ್ ಕಾನೂನು ಕ್ರಮ ಜರುಗಿಸಲು ಸಿಂಡಿಕೇಟು ಸರ್ವಾನುಮತದಿಂದ ನಿರ್ಣಯಿಸಿತು. ಈ ಕುರಿತು ಕುಲಸಚಿವರು (ಪರೀಕ್ಷಾಂಗ) ಇವರ ನೇತೃತ್ವದಲ್ಲಿ ಮುಂದಿನ ಎಲ್ಲಾ ಕಾನೂನು ಉಪಕ್ರಮಗಳನ್ನು ಜರುಗಿಸಲು ಸಂಪೂರ್ಣ ಅಧಿಕಾರವನ್ನು ಸಹ ನೀಡಲು ಸಿಂಡಿಕೇಟು ತೀರ್ಮಾನಿಸಿತು. ಜೊತೆಗೆ ಮೆ. ಆಟ್ರಿಸ್ ಟೆಕ್ನಾಲಜೀಸ್ (ಪ್ರೈ) ಲಿ., ಬೆಂಗಳೂರು ಸಂಸ್ಥೆಯ ವಿರುದ್ಧ ನಿಯಮಾನುಸಾರ ತನಿಖೆ ನಡೆಸಿ ಕಾನೂನು ಬಾಹಿರ ಕೃತ್ಯಗಳನ್ನು ಎಸಗಿದ ಕುರಿತು ಸಹಜ ನ್ಯಾಯ ತತ್ತ್ವವನ್ನು ಸಂಪೂರ್ಣವಾಗಿ ಅನುಸರಿಸಿ ತಪ್ಪಿತಸ್ಥ

ಎಂದು ಕಂಡು ಬಂದಲ್ಲಿ ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಸೂಕ್ತ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

3. ಪ್ರಕರಣದ ಕುರಿತು ವಿಚಾರಣೆ ನಡೆಸಲು ಜಿಲ್ಲಾ ಮಟ್ಟದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಿಂಡಿಕೇಟು ಸದಸ್ಯರಾದ ಡಾ. ಎನ್. ಪಿ. ನಾರಾಯಣ ಶೆಟ್ಟಿ, ಪ್ರಾಂಶುಪಾಲರು, ಭಂಡಾರ್‌ಕಾರ್ಸ್ ಆರ್ಟ್ಸ್ ಆಂಡ್ ಸಾಯನ್ಸ್ ಕಾಲೇಜು, ಕುಂದಾಪುರ – 576 201 ಇವರನ್ನೊಳಗೊಂಡ ಸಮಿತಿಯನ್ನು ರಚಿಸಲು ಮತ್ತು ಸಮಿತಿಯ ವರದಿಯನ್ನು ಮೂರು ತಿಂಗಳೊಳಗೆ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. ನ್ಯಾಯಾಧೀಶರನ್ನು ಗುರುತಿಸಿ ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

## I. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ವಿ.ಸ. 2:1 (2021)ರ**

**ವಿಷಯ:** ಲಕ್ಷಾಂತರ ರೂಪಾಯಿ ನೀಡಿ ವಂಚನೆಗೊಳಗಾದ ಕುರಿತು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ವರದಿ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು.

ಡಾ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣುಜೀವವಿಜ್ಞಾನ ವಿಭಾಗ ಹಾಗೂ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮಂಗಳೂರು ವಿಶ್ವವಿದ್ಯಾನಿಲಯ ಇವರು ದಿನಾಂಕ 27.03.2021ರಂದು ಮಂಗಳೂರಿನ ಕಂಕನಾಡಿ ಟೌನ್ ಪೊಲೀಸ್ ಠಾಣಾಧಿಕಾರಿಯವರಿಗೆ ಎಫ್.ಐ.ಆರ್. ಸಂಖ್ಯೆ 0042/2021 ರನ್ವಯ ಲಿಖಿತ ದೂರನ್ನು ಸಲ್ಲಿಸಿದ್ದು, ಅದರಲ್ಲಿ ಆರೋಪಿಗಳಾದ ಪ್ರಸಾದ್ ಅತ್ತಾವರ, ವಿವೇಕ್, ಗೋಪಾಲಕೃಷ್ಣ, ಭರತ್ ಮತ್ತು ಮಂಜು ಎಂಬವರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ, 406, 417, 420, 506 ಮತ್ತು 34ರಡಿಯಲ್ಲಿ ಶಿಕ್ಷಾರ್ಹ ಗಂಭೀರ ಅಪರಾಧ ಕೃತ್ಯಗಳನ್ನು ಎಸಗಿದ್ದಾರೆಂದು ಆರೋಪಿಸಿದ್ದು, ಅವರು ಸಲ್ಲಿಸಿರುವ ಲಿಖಿತ ದೂರಿನಲ್ಲಿ ತಿಳಿಸಿದಂತೆ ರಾಯಚೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆ ಕೊಡಿಸುವ ಕಾರಣಕ್ಕಾಗಿ ಆರೋಪಿಗಳಿಗೆ 16 ಲಕ್ಷ ಹಣ, 1.5 ಲಕ್ಷದ ಚೆಕ್ ಹಾಗೂ ವಿಜಯ ಬ್ಯಾಂಕಿನ ಮೂರು ಖಾಲಿ ಚೆಕ್‌ಗಳನ್ನು ನೀಡಿದ್ದೇನೆಂದು ತಿಳಿಸಿರುತ್ತಾರೆ. ಆದರೆ, ಆರೋಪಿಗಳು ರಾಯಚೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆ ಕೊಡಿಸಲು ವಿಫಲರಾಗಿದ್ದು, ತನ್ಮೂಲಕ ವಂಚನೆ ಎಸಗಿದ್ದಾರೆಂದು ಗಂಭೀರ ಸ್ವರೂಪದ ಆರೋಪ ಮಾಡಿರುತ್ತಾರೆ.

ಸದರಿ ಕೃತ್ಯವು ಡಾ. ಎಂ. ಜಯಶಂಕರ್ ರವರು ಎಸಗಿದ ನೈತಿಕ ಅಧಃಪತನದ ಕೃತ್ಯವಾಗಿದ್ದು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಹುದ್ದೆಗೆ ಹಾಗೂ ಸ್ಥಾನಮಾನಕ್ಕೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ದುರ್ವರ್ತನೆ ಹಾಗೂ ಅಶಿಸ್ತಿಗೆ ಸಮನಾಗಿರುತ್ತದೆ. ವಿಶ್ವವಿದ್ಯಾನಿಲಯದ ಕುಲಪತಿಯಂತಹ ಉನ್ನತ ಶಾಸನಾತ್ಮಕ ಹುದ್ದೆಯನ್ನು ಕಾನೂನುಬಾಹಿರವಾಗಿ ಪಡೆಯುವ ದುರುದ್ದೇಶದಿಂದ ಮಧ್ಯವರ್ತಿಗಳಿಗೆ ಲಂಚ ನೀಡಿದ್ದು, ಇದರಿಂದಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಘನತೆಗೆ ಚ್ಯುತಿ ಉಂಟಾಗಿರುತ್ತದೆ.

ಈ ಕುರಿತು ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಇವರು ದಿನಾಂಕ 01-04-2021ರಂದು ನೀಡಿರುವ ನೋಟೀಸಿಗೆ ದಿನಾಂಕ 03-04-2021 ರಂದು ಡಾ. ಎಂ. ಜಯಶಂಕರ್ ರವರು ನೀಡಿದ ಲಿಖಿತ ವಿವರಣೆಯನ್ನು ಪರಿಗಣಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಮಗ್ರ ಪ್ರಕರಣವನ್ನು ವಿಮರ್ಶಿಸಿದ್ದು, ಡಾ. ಎಂ. ಜಯಶಂಕರ್ ರವರ ನಡತೆ ಹಾಗೂ ಎಸಗಿದ ಭ್ರಷ್ಟ ಮಾರ್ಗದ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದ್ದು, ವಿಶ್ವವಿದ್ಯಾನಿಲಯದ ಘನತೆಯನ್ನು ಎತ್ತಿಹಿಡಿಯುವ ಹಾಗೂ ಶೈಕ್ಷಣಿಕ ಸಂಸ್ಥೆಯ ಪಾವಿತ್ರ್ಯತೆಯನ್ನು ಕಾಪಾಡುವ ಮತ್ತು ಇತರ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ನೈತಿಕ ಮೌಲ್ಯವನ್ನು ರಕ್ಷಿಸುವ ಸದುದ್ದೇಶದಿಂದ ಡಾ. ಎಂ. ಜಯಶಂಕರ್ ರವರು ಎಸಗಿದ ಕೃತ್ಯಗಳ ಕುರಿತು ನಿವೃತ್ತ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇಲಾಖಾ ಆಂತರಿಕ ವಿಚಾರಣೆ ನಡೆಸಲು ಈ ಮೂಲಕ ನಿರ್ಣಯ ಕೈಗೊಳ್ಳುತ್ತಿದೆ.

ಪ್ರಕರಣವು ಗಂಭೀರ ಸ್ವರೂಪದ್ದಾಗಿರುವುದರಿಂದ ಆಂತರಿಕ ವಿಚಾರಣೆಯ ಸ್ವತಂತ್ರತೆಯನ್ನು ಮತ್ತು ಗೌಪ್ಯತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಸೇವಾ ನಿಯಮದಡಿಯಲ್ಲಿ ಪ್ರದತ್ತವಾದ ಅಧಿಕಾರ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ದಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಡಾ. ಎಂ. ಜಯಶಂಕರ್ ರವರನ್ನು ತಕ್ಷಣದಿಂದ ಅನ್ವಯವಾಗುವಂತೆ, ಮುಂದಿನ ಆರು ತಿಂಗಳ ಅವಧಿಯವರೆಗೆ ಪ್ರಾಧ್ಯಾಪಕರ ಹುದ್ದೆಯಿಂದ ಅಮಾನತುಗೊಳಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

ಸದರಿ ಆಂತರಿಕ ವಿಚಾರಣೆ ನಡೆಸಲು ಮತ್ತು ಅಮಾನತು ಆದೇಶ ಹೊರಡಿಸಲು ವಿಶ್ವವಿದ್ಯಾನಿಲಯದ ಸಂಬಂಧಿತ ಶಾಸನಾತ್ಮಕ ಅಧಿಕಾರಿಗಳಿಗೆ / ಪ್ರಾಧಿಕಾರಕ್ಕೆ ಕಾನೂನಿನ ನಿಯಮಾನುಸಾರ ಕ್ರಮ ಕೈಗೊಳ್ಳಲು ಈ ಮೂಲಕ ಅಧಿಕಾರವನ್ನು ನೀಡುವ ನಿರ್ಣಯವನ್ನು ಸಹ ಸಿಂಡಿಕೇಟ್ ಕೈಗೊಳ್ಳುತ್ತದೆ.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**(ಸಹಿ)** **(ಸಹಿ)**

ಕುಲಸಚಿವರು

ಕುಲಪತಿಗಳು.